## ಕೂರ್ಮಾಸನ!

ಆಸ್ತಿಕರ ಆಹ್ನಿಕಕ್ಕೂ, ಕುಳಿತು ದೇವರ ಪೂಜಾ ಕಾರ್ಯ ನಿರ್ವಹಿಸಲೂ ಅನುಕೂಲವಾಗುವಂತೆ ಕೂರ್ಮ(ಆಮೆ) ರೂಪದ ಮಣೆಯನ್ನು ಕೆತ್ತಲಾಗಿದೆ. ಬೀಟೆ ಮರದಿಂದ ತಯಾರಾದ ಈ ಪೀಠ ಇಡಿಯಾಗಿದ್ದು, ಯಾವುದೇ ಭಾಗವನ್ನು ಜೋಡಿಸಿಲ್ಲ. ಶತಮಾನದ ಹೊಸ್ತಿಲಲ್ಲಿರುವ ಈ ಪೀಠ ಇಂದಿಗೂ ಸುಸ್ಥಿತಿಯಲ್ಲಿದ್ದು, ಅಧ್ಯಾತ್ಮ ಸಾಧಕರ ಅನುಷ್ಠಾನಕ್ಕೆ ನೆರವಾಗುತ್ತಿದೆ. ಈ ಅಪರೂಪದ ಮಣೆ ಉತ್ತರ ಕನ್ನಡ ಜಿಲ್ಲೆ ಬನವಾಸಿಯ ಪ್ರಭಾಕರ ಭಟ್ಟರ ಮನೆಯಲ್ಲಿದೆ.

**-ಮೃತ್ಯುಂಜಯ ಎಚ್.ಎಸ್.,**
**ಬೆಂಗಳೂರು**






## ವೃತ್ತಿ ಪ್ರೀತಿಗೆ ಸಾಕ್ಷಿ!

ಕೊಪ್ಪಳದ ಚಂದಾಲಿಂಗಪ್ಪ ಯಲಿಗಾರ ತಾವು ನಿರ್ವಾಹಕನಾಗಿ ಕರ್ತವ್ಯ ನಿರ್ವಹಿಸಿದ ಬಸ್ಸಿನ ಮಾದರಿಯನ್ನು ಮನೆಯಲ್ಲಿ ಮಾಡಿಸಿ ಇಟ್ಟುಕೊಂಡಿದ್ದಾರೆ. ಕೊಪ್ಪಳ– ವಿಜಯಪುರ ಮಾರ್ಗದ ಕೆಎ 37 ಎಫ್ 81 ನಂಬರಿನ ಈ ಬಸ್ಸಿನಲ್ಲಿ ಕಾರ್ಯನಿರ್ವಹಿಸಿದ ಯಲಿಗಾರ ಅವರು ಆ ಬಸ್ ನಿರುಪಯುಕ್ತ ಎಂದು ಬದಲಾಯಿಸುವವರೆಗೂ ಆ ಬಸ್ಸಿನಲ್ಲೇ ಕಾರ್ಯನಿರ್ವಹಿಸಿದ್ದಾರೆ. ಆ ಬಸ್ಸಿನ ಸವಿನೆನಪಿಗಾಗಿ ಮನೆಯಲ್ಲಿ ಆ ಬಸ್ಸಿನ ಮಾದರಿಯನ್ನು ಕಲಾವಿದರಿಂದ ಮಾಡಿಸಿ ಇಟ್ಟುಕೊಂಡಿದ್ದಾರೆ. ಈ ಬಸ್ಸಿನಲ್ಲಿ ಚಾಲಕನ ಸೀಟು, ಸ್ಟೇರಿಂಗ್, ಪ್ರಯಾಣಿಕರ ಆಸನ, ಬಾಗಿಲು, ಒಳಗಡೆ ಲೈಟ್ ಹಾಕುವ ವ್ಯವಸ್ಥೆಯನ್ನು ಮಾಡಿಸಿದ್ದಾರೆ.

35 ವರ್ಷಗಳ ಕಾಲ ಕರ್ತವ್ಯವನ್ನು ಪ್ರೀತಿಯಿಂದ ಮಾಡಿರುವ ಅವರು ನಿವೃತ್ತಿ ಜೀವನವನ್ನು ಕೊಪ್ಪಳದಲ್ಲಿ ಕಳೆಯುತ್ತಿದ್ದಾರೆ.

**-ನಾಗರಾಜನಾಯಕ ಡಿ.ಡೊಳ್ಳಿನ, ಕೊಪ್ಪಳ**

## ಬೆಳ್ಳಿ ವಸ್ತುಗಳ ಮೋಡಿ

ಶುದ್ಧ ಬೆಳ್ಳಿಯಿಂದ ತಯಾರಾದ ಈ ವಸ್ತುಗಳಲ್ಲಿ ನಾವು ನಿತ್ಯ ಬಳಸುವ ಸಾಮಾನುಗಳಿವೆ. ಬಿಂದಿಗೆ, ಈಳಿಗೆ ಮಣೆ, ಧಾನ್ಯ ಕೇರುವ ಮೊರ, ಬಕೆಟ್, ಒಲೆ, ಒಳಲೆ, ಕಾರು, ಹರಿವಾಣ, ಹಡಗು, ಬಾಳೆಹಣ್ಣಿನ ಚಿಪ್ಪು, ತೆಂಗಿನಕಾಯಿ.. ಅವುಗಳ ಮೇಲೆ ನಾಜೂಕಿನ ಕೆತ್ತನೆ ಕೂಡಾ ಇದೆ.

ನಮ್ಮ ಮಗಳ ಮನೆಯಲ್ಲಿ ಪ್ರತಿ ವರ್ಷ ನವರಾತ್ರಿಯ ಸಂದರ್ಭದಲ್ಲಿ ಗೊಂಬೆಗಳೊಂದಿಗೆ ಪ್ರದರ್ಶನಕ್ಕೆ ಇಡಲಾಗುತ್ತದೆ. ನಾಲ್ಕು ತಲೆಮಾರುಗಳ ಹಿಂದೆಯೇ ಈ ವಸ್ತುಗಳನ್ನು ತಯಾರಿಸಲಾಗಿದ್ದು, ಹಿರಿಯರ ಅಭಿರುಚಿ ಮೆಚ್ಚತಕ್ಕದ್ದು.

**-ಪ್ರಭಾ ಪ್ರಸಾದ್, ಬೆಂಗಳೂರು**

